(ಸಾಕ್ಷಿಯನ್ನು ಈ ದಿನ ದಿನಾಂಕ.**31.07.2024** ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.)

ಪಾಟೀಸವಾಲು ಃ ವಾದಿ ಪರ ಶ್ರೀ ವಿ ಜಿ ಸಿ ವಕೀಲರಿಂದಃ

ವಿಠ್ಠಪ್ಪ ಮಲಕಪ್ಪ ವಾಲೀಕಾರ ಇವರು ನನ್ನ ಮುತ್ತಜ್ಜ ಸದರಿ ವಿಠ್ಠಪ್ಪ ಮಲಕಪ್ಪ ವಾಲೀಕಾರ ಇವರಿಗೆ ಬೀಮಪ್ಪ**,** ಶಿವಲಿಂಗಪ್ಪ ಮತ್ತು ಅವಣ್ಣ ಈ ರೀತಿ **3** ಗಂಡು ಮಕ್ಕಳಿದ್ದರು. ಸದರಿ ಬೀಮಪ್ಪ**,** ಶಿವಲಿಂಗಪ್ಪ ಮತ್ತು ಅವಣ್ಣ **3** ಜನ ಮರಣ ಹೊಂದಿರುತ್ತಾರೆ ಎಂದರೆ ಸರಿ. ಸರ್ವೆ ನಂಬರ **146, 56** ಮತ್ತು **138** ರ ಆಸ್ತಿಗಳು ವಿಠ್ಠಪ್ಪ ಮಲಕಪ್ಪ ವಾಲೀಕಾರ ಇವರಿಂದ ಬಂದ ಆಸ್ತಿಗಳು ಎಂಬ ಪ್ರಶ್ನೆಗೆ ಸಾಕ್ಷಿ ಕೇವಲ ಸರ್ವೆ ನಂಬರ **146** ಮತ್ತು **56** ಮಾತ್ರ ವಿಠ್ಠಪ್ಪ ಮಲಕಪ್ಪ ವಾಲೀಕಾರ ಇವರಿಂದ ಬಂದಿವೆ ಮತ್ತು ಸರ್ವೆ ನಂಬರ **138** ನಮ್ಮ ಅಜ್ಜ ಬೀಮಪ್ಪ ಈತನಿಗೆ ವಾಲಿಕಾರಕಿಯಲ್ಲಿ ಬಂದಿರುತ್ತದೆ ಎಂದು ನುಡಿಯುತ್ತಾರೆ.

ಸರ್ವೆ ನಂಬರ **138** ವಿಠ್ಠಪ್ಪ ಮಲಕಪ್ಪ ವಾಲೀಕಾರ ಇವರ ಸಾಗುವಳಿ ಮಾಡಿದ್ದರಿಂದ ಟೆನೆನ್ಸಿ ಯಾಕ್ಟನಲ್ಲಿ ಬಂದಿದೆ ಎಂದರೆ ಸರಿಯಲ್ಲ. ವಿಠ್ಠಪ್ಪ ಮಲಕಪ್ಪ ವಾಲೀಕಾರ ಇವರಿಗೆ ತಳವಾರ ಎಂದು ಕರೆಯುತ್ತಿದ್ದರು ಎಂದರೆ ಸರಿ. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ನಿಪಿ**13** ರಲ್ಲಿ ವಿಠ್ಠಪ್ಪ ಮಲಕಪ್ಪ ತಳವಾರ ಎಂಬ ಉಲ್ಲೇಖ ಇದೆ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಮುತ್ತಜ್ಜ ವಿಠ್ಠಪ್ಪ ಮಲಕಪ್ಪ ವಾಲೀಕಾರ ಇವರು ಭಾಗಪ್ಪ ಸಂಗಪ್ಪ ವಾಲಿಕಾರ ಇವರಿಂದ ಇಳುವತ್ತಿ ಎಂದು ಬರೆಸಿಕೊಂಡಿದ್ದರು **10** ವರ್ಷದ ನಂತರ ಸದರಿ ಭಾಗಪ್ಪ ಸಂಗಪ್ಪ ವಾಲಿಕಾರ ಇವರಿಗೆ ವಾಪಸ್ಸು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

**1945** ರಲ್ಲಿ ವಿಠ್ಠಪ್ಪ ಮರಣ ಹೊಂದಿದ ನಂತರ ಆತನಿಗೆ ಸೇರಿಗೆ ಆಸ್ತಿಗಳಾದ ಸರ್ವೆ ನಂಬರ **146, 56** ಮತ್ತು **138** ಆತನ ಮಗನಾದ ಕೇವಲ ಬೀಮಪ್ಪನ ಹೆಸರಿಗೆ ಏಕತ್ರ ಕುಟುಂಬದ ಮ್ಯಾನೇಜರ್ ಆಗಿ ವಾರಸಾ ಆಗಿವೆ ಎಂದರೆ ಸರಿ. **1973** ರಲ್ಲಿ ನನ್ನ ತಂದೆ ಸಂಗಪ್ಪ ಬೀಮಪ್ಪ ವಾಲೀಕಾರ**,** ಅವಣ್ಣ ಮತ್ತು ಶಿವಲಿಂಗಪ್ಪ ವಾಟ್ನಿ ಮಾಡಿಕೊಂಡಿರುತ್ತಾರೆ. ಸದರಿ ವಾಟ್ನಿಯಲ್ಲಿ ನಮ್ಮ ಅಜ್ಜ ಬೀಮಪ್ಪ ವಿಠ್ಠಲ ವಾಲೀಕರ ಇವರಿಗೆ ಸರ್ವೆ ನಂಬರ **138** ರಲ್ಲಿ **30** ಎಕರೆ **2** ಗುಂಟೆ ಜಮೀನು**,** ಅವಣ್ಣ ಇವರಿಗೆ ಸರ್ವೆ ನಂಬರ **146** ರಲ್ಲಿ **7** ಎಕರೆ ಜಮೀನು**,** ಶಿವಲಿಂಗಪ್ಪ ಇವರಿಗೆ ಸರ್ವೆ ನಂಬರ **56** ರಲ್ಲಿ **5** ಎಕರೆ **10** ಗುಂಟೆ ಜಮೀನು ಬಂದಿರುತ್ತವೆ. **1973** ರಲ್ಲಿ ಆದ ವಾಟ್ನಿ ಪತ್ರ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ವಾಟ್ನಿ ಪತ್ರಕ್ಕೆ ಯಾರು ಸಹಿ ಹಾಕಿರುತ್ತಾರೆ ಎಂದು ನಾನು ನೋಡಿಲ್ಲ. ಸಾಕ್ಷಿ ಮುಂದುವರೆದ ಸದರಿ ವಾಟ್ನಿ ಪತ್ರಕ್ಕೆ ಸೀತಪ್ಪಗೌಡ**,** ಶಿವಲಿಂಗಪ್ಪಗೌಡ ಮತ್ತು ಇತರರು ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

**1973** ರಲ್ಲಿ ಆದ ವಾಟ್ನಿಯಲ್ಲಿ ಸರ್ವೆ ನಂಬರ **138** ಯಾವ ಕಾರಣಕ್ಕೆ ಸೇರಿಸಲಾಗಿದೆ ಎಂದರೆ ಸದರಿ ಆಸ್ತಿ ನನ್ನ ಅಜ್ಜ ಬೀಮಪ್ಪನಿಗೆ ಬಂದಿದ್ದರಿಂದ ಸೇರಿಸಲಾಗಿದೆ ಎಂದು ನುಡಿಯುತ್ತಾರೆ. ಸರ್ವೆ ನಂಬರ **146, 56** ಮತ್ತು **138** ನಮ್ಮ ಮುತ್ತಜ್ಜ ವಿಠ್ಠಪ್ಪ ಮಲಕಪ್ಪ ವಾಲೀಕಾರ ಈತನಿಂದ ಬಂದ ಆಸ್ತಿ ಆಗಿದ್ದರಿಂದ **1973** ರಲ್ಲಿ ಆದ ವಾಟ್ನಿಯಲ್ಲಿ ಸರ್ವೆ ನಂಬರ **138** ಸೇರಿಸಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ ಸರ್ವೆ ನಂಬರ **138** ಕೇವಲ ನನ್ನ ಅಜ್ಜ ಬೀಮಪ್ಪ ವಿಠ್ಠಪ್ಪ ವಾಲೀಕಾರ ಇವರಿಗೆ ಬಂದಿದೆ ಎಂದು ನುಡಿಯುತ್ತಾರೆ. ಬೀಮಪ್ಪ ವಿಠ್ಠಪ್ಪ ವಾಲೀಕಾರ ಈತನು

ವಿಠ್ಠಪ್ಪ ಮಲಕಪ್ಪ ವಾಲೀಕಾರ ಈತನ ಹಿರಿಯ ಮಗ ಆಗಿದ್ದರಿಂದ **1972** ರಲ್ಲಿ ಸರ್ಕಾರಕ್ಕೆ ತುಂಬಬೇಕಾದ ಶುಲ್ಕಗಳನ್ನು ತುಂಬಿ ಸರ್ವೆ ನಂಬರ **138** ಅನ್ನು ನೇರವಾಗಿ ಬೀಮಪ್ಪ ವಿಠ್ಠಪ್ಪ ವಾಲೀಕಾರ ಹೆಸರಿಗೆ ಮಾಡಿಕೊಂಡಿರುತ್ತಾನೆ ಎಂಬ ಪ್ರಶ್ನೆಗೆ ಸಾಕ್ಷಿ **1942** ರಲ್ಲಿ ಸರ್ವೆ ನಂಬರ **138** ನನ್ನ ಅಜ್ಜ ಬೀಮಪ್ಪ ವಾಲೀಕಾರ ಈತನ ಹೆಸರಿಗೆ ಬಂದಿದೆ ಎಂದು ನುಡಿಯುತ್ತಾರೆ. **1** ರಿಂದ **7** ನೇ ಪ್ರತಿವಾದಿಯರು ವಾದಿ ಮತ್ತು ಇತರ ಪ್ರತಿವಾದಿಯರಿಗೆ ಗೊತ್ತಾಗದಂತೆ ನಿಡಿ**8** ರಂತೆ ಕಂದಾಯ ದಾಖಲಾತಿ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. **4** ನೆ ಪ್ರತಿವಾದಿ ಗುರಪ್ಪ **2017** ರಲ್ಲಿ ಸರ್ವೆ ನಂಬರ **138/3** ಕ್ಷೇತ್ರ **4** ಎಕರೆ **15** ಗುಂಟೆ ಜಮೀನನ್ನು ಸಿದ್ದಪ್ಪ ಸಿದಲಿಂಗಪ್ಪ ಬಿರಾದಾರ ಇವರಿಗೆ ಮಾರಾಟ ಮಾಡಿರುತ್ತಾನೆ ಎಂದರೆ ಸರಿ.

ನಿಡಿ**1** ಅನ್ನು ನನ್ನ ತಂದೆ ಸೃಷ್ಟಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅವ್ವಣ್ಣ ಇವರಿಗೆ ಪ್ರಾಪಂಚಿಕ ಜ್ಞಾನ ಇರಲಿಲ್ಲ ಎಂದರೆ ಸರಿಯಲ್ಲ. ನಿಡಿ**8** ಸಹ ನಾವು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಯಾವುದೆ ವಾಟ್ನಿ ಆಗದಿದ್ದರೂ ಸಹ ವಾಟ್ನಿ ಆಗಿರುತ್ತವೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ವ

ಜೆ ಎಂ ಎಫ್ ಸಿ, ಸಿಂದಗಿ.